ಸಾವಿತ್ರಿದೇವಿ ಎಸ್. ಜನವಾಡಕರ್, ಕಲಬುರಗಿ

*ಗಂಡಸರು ತಮ್ಮ ಎರಡೂ ಕೈಗಳನ್ನು ಯಾವಾಗಲೂ ಜೇಬಿನಲ್ಲಿ ಇಟ್ಟುಕೊಳ್ಳುತ್ತಾರಲ್ಲ, ಏಕೆ?*



ಮೂರನೆಯ ಕೈ ತೂರಿ ಪಿಕ್‌ಪಾಕೆಟ್ ಆಗದಿರಲೆಂದು.

ಕೃಷ್ಣಮೂರ್ತಿ ಎನ್. ಮನ್ನಾರಿ, ಶಿವಮೊಗ್ಗ

*ಜೀವನವು ತುಂಬಾ ಜಂಜಡಗಳಿಂದ ತುಂಬಿರುವುದೇಕೆ?*

ಪ್ರಪಂಚವು ತುಂಬಾ ಜಡಜನಗಳಿಂದ ತುಂಬಿರುವುದರಿಂದ.

ಕೊಕ್ಕಡ ವೆಂಕಟ್ರಮಣಭಟ್, ಮಂಡ್ಯ

*ಸುದ್ದಿವಾಹಿನಿಗಳ ವರದಿಗಾರರಿಗೆ ಸುದ್ದಿಗಳೆಲ್ಲಾ ಸ್ಟೋರಿಗಳಾಗುತ್ತವೆಯೇಕೆ?*

ಸುದ್ದಿ ಸೀರೆ; ವರದಿಗಾರ ದುಃ–ಶಾಸನ; ವರದಿ ಎಳೆದೂ, ಎಳೆದೂ ಆಗುವುದು ಸ್ಟೋರಿ!

ಎ.ಕೆ. ಪಟ್ಟಾಭಿ, ಬೆಂಗಳೂರು

*ಬರೆದು ಬದುಕುವವನು ಬ್ಯಾಂಕಿನಲ್ಲಿ ಹಣ ಇಟ್ಟಾನೆಯೆ?*



ಬ್ಲ್ಯಾಕ್‌ಮೇಯ್ಲ್ ಪತ್ರ ಬರೆದು ಬದುಕುವವನಾದರೆ ಹಣವೇನು, ಬ್ಯಾಂಕೇ ಇಟ್ಟಾನು.

ಶ್ರೀನಾಥ್ ಕೊನೇಟಿ, ಬೆಂಗಳೂರು

*ಗಾಂಧೀಜಿಯವರು ಕಡೇ ಘಳಿಗೆಯಲ್ಲಿ 'ಹೇ ರಾಮ್, ಹೇ ರಾಮ್' ಎಂದು ಕೂಗಿದಾಗ ನೀವೆಲ್ಲಿದ್ದಿರಿ?*

'ನಾ(ನಹೀ)…. ನಾ… ನಾ…. ಥೂ ರಾಮ್' ಎಂದು ನಾಥೂರಾಮ್‌ಗೆ ಹಿಂದಿಯಲ್ಲಿ ಗುಂಡುಹೊಡೆಯಬೇಡ ಎಂದು ಅರಚಿಕೊಳ್ಳುತ್ತಿದ್ದೆ.

ಅಮರಯ್ಯ ಪತ್ರಿಮಠ, ಶೋರಾಪೂರ

*ನಿಮಗೆ 'ಅಕ್ಷಯಪಾತ್ರೆ' ದೊರೆತರೆ ಏನು ಮಾಡುತ್ತೀರಿ?*

ಇಡೀ ದಿನ ಉಂಡವರ ಎಂಜಲು ಬಾಚುವುದೇ ಕೆಲಸವಾಗಿಬಿಡುವುದರಿಂದ, ಆಂಟಿಕ್ ಡೀಲರ್‌ಗೆ ಒಳ್ಳೆಯ ಬೆಲೆಗೆ ಮಾರಿಬಿಡುತ್ತೇನೆ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ

*ಉತ್ತರ ನೀಡುವ ನೀವು ಭೀಷ್ಮನಂತೆ ಉತ್ತರಾಯಣಕ್ಕೆ ಕಾಯುವಿರೇನು?*

ಸಾಧ್ಯವಿಲ್ಲ ಬಿಡಿ. ಭೀಷ್ಮನೂ ನರ್ಸಿಂಗ್ ಹೋಂನಲ್ಲಿದ್ದಿದ್ದರೆ ಬಾಣದ ನೋವಿಗಿಂತ ಬಿಲ್ಲಿನ ಭಯಕ್ಕೆ ಬೇಗ ಹೋಗಿಬಿಡುತ್ತಿದ್ದರು!

ಅಲ್ಲಾ ಬಕಷ್, ಮಧುಗಿರಿ

*ಅಡಿಗೆಯಲ್ಲಿ ನಾವೇ ಮುಂದೆನ್ನುವ ಮಹಿಳೆಯರು ಮದುವೆ ಮನೆಗಳಲ್ಲೇಕೆ ಅಡಿಗೆ ಮಾಡುವುದಿಲ್ಲ?*

ಅವರಿಗೆ ಗಸಗಸೆ ರುಬ್ಬುವುದಕ್ಕಿಂತ ಗುಸುಗುಸು ಹಬ್ಬುವುದು ಪ್ರಿಯವಾದ್ದರಿಂದ.

ಎನ್.ಎಂ. ಶಿವಶಂಕರ್, ಮೈಸೂರು

*ಪ್ರಶಂಸೆಗೂ, ಹೊಗಳಿಕೆಗೂ ವ್ಯತ್ಯಾಸವೇನು ರಾಮಣ್ಣ?*

ಸಾಧನೆಗೆ ಪ್ರಶಂಸೆ, ಸಮಯಸಾಧನೆಗೆ ಹೊಗಳಿಕೆ.

ಎಂ.ಎ. ರುಕ್ಮಿಣಿ, ಊರಿಲ್ಲ

*ವಾರದಲ್ಲಿ 7 ದಿನಗಳು ಎನ್ನುವ ನಾವು ಸೋಮವಾರ, ಮಂಗಳವಾರ… ಎನ್ನುವುದೇಕೆ? ಸೋಮದಿನ, ಮಂಗಳದಿನ ಎನ್ನಬಹುದಲ್ಲವೆ?*

ದಿನಕ್ಕೊಂದು **war** ಇರುವುದರಿಂದ **wara** ಎಂದರೆ ತಪ್ಪಿಲ್ಲವಂತೆ. ವಾಸ್ತವವಾಗಿ ವಾರ ಎಂಬುದು ವಾಸರದ ಅಪಭ್ರಂಶ.

ಸ್ವಾಮಿ ಗುರುಸಿದ್ಧಾನಂದ, ಬೆಳಗಾವಿ

*ಮದುವೆಯಾದವರಿಗೂ, ಆಗಲಾರದವರಿಗೂ ಏನು ವ್ಯತ್ಯಾಸ 'ರಮ್' ಜೀ?*

ಆದವರು ಹೆಂಡತಿಗೆ ಸ್ವಾಮಿ, ಆಗಲಾರದವರು ಪ್ರಪಂಚಕ್ಕೇ ಸ್ವಾಮಿ!

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ

*ಹನಿಹನಿಗೂಡಿದರೆ ಹಳ್ಳ, ಮಾತು ಮಾತು ಸೇರಿದರೆ ಜಗಳ. ಜಗಳ ಜಗಳ ಸೇರಿದರೆ?*

ಎರಡೂ ಕಡೆಯ ವಕೀಲರಿಗೆ ಮಹಡಿಮನೆಯ ಯೋಗ.

## ಬಹುಮಾನಿತ ಪ್ರಶ್ನೆ

ಬಿ. ಸವಿತಾ, ಹುಬ್ಬಳ್ಳಿ

ರಾಮ್‌ಜೀ, ಕೆಲವೊಮ್ಮೆ ನಮ್ಮ ಕೆನ್ನೆಗೆ ನಾವೇ ಹೊಡೆದುಕೊಳ್ಳುತ್ತೇವೆ. ಯಾವಾಗ ಹೇಳಿ ನೋಡೋಣ?

ಕೆನ್ನೆಯ ಮೇಲೆ ಸೊಳ್ಳೆ ಕೂತಾಗ!

ಎಂ.ಎನ್. ಸೋಮಶೇಖರ್, ಮೈಸೂರು

*ವಿಲ್ ಪವರ್ ಉದ್ಭವಿಸುವುದು ಶರೀರದಲ್ಲೋ, ಆತ್ಮದಲ್ಲೋ?*

ವ್ಯಕ್ತಿ ಸತ್ತನಂತರ ವಿಲ್ ಎಕ್ಸಿಕ್ಯೂಟ್ ಮಾಡುವವರ ಕಚೇರಿಯಲ್ಲಿ, ವಕೀಲರ ಸಮ್ಮುಖದಲ್ಲಿ.

ಜಿ.ಎನ್. ಕಟ್ಟೀಮನಿ, ರಾಣೇಬೆನ್ನೂರ್

*ನಮ್ಮ ರಾಜ್ಯದೊಳಗೆ ಇಷ್ಟೆಲ್ಲಾ ಅತ್ಯಾಚಾರ, ಅನಾಚಾರ ನಡೆಯುತ್ತಿದ್ದರೂ ಒಳ್ಳೆ ಮಳೆ, ಬೆಳೆ ಆಗುತ್ತಿದೆಯಲ್ಲಾ ರಾಮ್ ಸಾಹೇಬ್ರ?*

ಕೊಲೆಗಾರನಿಗೆ ರಾಷ್ಟ್ರಪತಿಗಳು ಕ್ಷಮಾದಾನ ನೀಡುವಂತೆ ಒಂದು ಲಾಸ್ಟ್ ಛಾನ್ಸ್ ಕೊಡುತ್ತಿದೆಯಂತೆ!

ಎಂ.ಜಿ. ಚನ್ನಪ್ಪಸ್ವಾಮಿ, ಭದ್ರಾವತಿ

*ಅಕಸ್ಮಾತ್ ಪಕ್ಷಿಗಳಂತೆ ನಮಗೂ ಹಾರಲು ಬಂದಿದ್ದರೆ?*



ಅಪಾರ್ಟ್‌ಮೆಂಟ್‌ಗಳಲ್ಲಿ ಮೆಟ್ಟಿಲು, ಲಿಫ್ಟ್‌ಗಳ ಖರ್ಚು ಉಳಿಯುತ್ತಿತ್ತು. ಆ ಸ್ಥಳದಲ್ಲಿ ಮತ್ತಷ್ಟು ಫ್ಲ್ಯಾಟ್ಸ್ ಇರುತ್ತಿತ್ತು.

ವಸಂತರಾವ್ ಸುಂಕದ, ಬೆಳಗಾಂವ

*ಗುರು, ಸದ್ಗುರು, ಮಹಾಗುರು; ವಿಶ್ಲೇಷಣೆ ನೀಡುವಿರಾ ರಾಂಜೀ?*

ಅಕ್ಷರಂ ಕಲಿಸಿದಾತಂ ಗುರು; ಕ್ಯಾಸೆಟ್ಟೊಳ್ ಸದ್ದಿನ ಮೂಲಕ ಕಲಿಸಿದಾತಂ ಸದ್ಗುರು; ಟುಟೋರಿಯಲೊಳ್ ಕಲಿಸುವಾತಂ ಮಹಾಗುರು!

■ ರಾಮ್